**ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು, ಹುಣಸೂರು ಪೀಠ.**

**SC No**.198/2021

**PW**. 8

**CW**. 15

**ಸಾಕ್ಷಿಯ ಹೆಸರು –ಶಿವಪ್ರಕಾಶ ಎಸ್**

**ತಂದೆಯ ಹೆಸರು –ಸಿದ್ಧಯ್ಯ**

**ವಯಸ್ಸು –44 ವರ್ಷಗಳು** ದಿನಾಂಕ 02–04–2026 ರಂದು ಪ್ರಮಾಣವಚನ ಬೋಧಿಸಲಾಯಿತು.

**ಉದ್ಯೋಗ –ಪಿ ಐ , ಕೆ ಆರ್ ನಗರ ಪೊಲೀಸ್ ಠಾಣೆ**

**ವಾಸಸ್ಥಳ –ಕೆ ಆರ್ ನಗರ**

**ಮುಖ್ಯ ವಿಚಾರಣೆಃ– ಸರ್ಕಾರಿ ಅಭಿಯೋಜಕರಿಂದಃ–**

ನಾನು ಸೆಪ್ಟೆಂಬರ್ 2018 ರಿಂದ ಫೆಬ್ರವರಿ 2021 ರವರೆಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿ 27–06–2020 ರಂದು ಈ ಪ್ರಕರಣದ ಕಡತವನ್ನು ಚಾಸಾ–14 ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ಅದೇ ದಿನ ಮಧ್ಯಾಹ್ನ 2.00 ಗಂಟೆಗೆ ಚಾಸಾ–1 ರವರು ಮರು ದೂರನ್ನು ನೀಡಿದ್ದು , ಅದನ್ನು ಸ್ವೀಕರಿಸಿ , ಈಗಾಗಲೇ ನೊಂದಾವಣಿಯಾಗಿದ್ದ ಈ ಪ್ರಕರಣಕ್ಕೆ ಸೇರಿಸಿಕೊಂಡಿದ್ದೇನೆ. ಸದರಿ ಮರು ದೂರನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ–2(ಬಿ) ಎಂದು ಗುರುತಿಸಲಾಯಿತು. ಅದೇ ದಿನ ನ್ಯಾಯಾಲಯಕ್ಕೆ ಮನವಿ ಮಾಡಿಕೊಂಡು ಕಲಂ 307 ಅನ್ನು ಅಳವಡಿಸಿಕೊಳ್ಳಲು ಕೋರಿದ್ದೇನೆ. ಅದನ್ನು ಈಗ ನೋಡುತ್ತಿದ್ದು , ನಿಪಿ–19 ಎಂದು ಸಾಕ್ಷಿಯ ಸಹಿಯನ್ನು ನಿಪಿ–19(ಎ) ಎಂದು ಗುರುತಿಸಲಾಯಿತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಚಾಸಾ–2 ರವರು ಸ್ಥಳ ತೋರಿಸಿದ

ಮೇರೆಗೆ ಸಂಜೆ 5.00 ರಿಂದ 6.00 ರವರೆಗೆ ಪಂಚನಾಮೆ ಮಾಡಿ , ಸ್ಥಳದಲ್ಲಿ ಚಾಸಾ–2 ರವರು ಹಾಜರು ಮಾಡಿದ ಕಬ್ಬಿಣದ ಗುದ್ದಲಿಯಲ್ಲಿ ಜಪ್ತಿ ಮಾಡಿದ್ದೇನೆ. ಸದರಿ ಪಂಚನಾಮೆಯನ್ನು ಈಗಾಗಲೇ ನಿಪಿ–3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–3(ಸಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ತೆಗೆದ ಫೋಟೋಗಳನ್ನು ಈಗಾಗಲೇ ನಿಪಿ–4 ರಿಂದ 8 ಎಂದು ಗುರುತಿಸಲಾಗಿದೆ. ಅದೇ ದಿನ ಚಾಸಾ–2 ರಿಂದ 4 ರವರ ಹೇಳಿಕೆ ಪಡೆದಿದ್ದೇನೆ.

ದಿಃ 23–07–2020 ರಂದು 1 ರಿಂದ 10 ನೇ ಆರೋಪಿತರು ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾದ ಕಾರಣ 1 ರಿಂದ 10 ನೇ ಆರೋಪಿತರ ಸ್ವಇಚ್ಛಾ ಹೇಳಿಕೆ ಪಡೆದು ಬಿಡುಗಡೆ ಮಾಡಿದ್ದೇನೆ. ಅದೇ ದಿನ 2 ನೇ ಆರೋಪಿ ಕೃತ್ಯಕ್ಕೆ ಬಳಸಿದ ತನ್ನ ಬೈಕ್ ನಂ ಕೆ ಎ 09 ವೈ 5493 ಅನ್ನು ಹಾಜರುಪಡಿಸಿದ್ದು, ಅದನ್ನು ಬೆಳಗ್ಗೆ 10.00 ರಿಂದ 11.00 ವರೆಗೆ ಚಾಸಾ–7 ರವರ ಸಮಕ್ಷಮ ಜಪ್ತಿ ಮಾಡಿ ಪಂಚನಾಮೆ ಮಾಡಿದ್ದೇನೆ.

ಅದೇ ದಿನ 1 ನೇ ಆರೋಪಿ ಕೃತ್ಯಕ್ಕೆ ಬಳಸಿದ ತನ್ನ ಆಟೋ ನಂ ಕೆ ಎ 07 ಎ 5276 ಅನ್ನು ಹಾಜರುಪಡಿಸಿದ್ದು, ಅದನ್ನು ಬೆಳಗ್ಗೆ 11.00 ರಿಂದ 11.30 ವರೆಗೆ ಚಾಸಾ–7 ರವರ ಸಮಕ್ಷಮ ಜಪ್ತಿ ಮಾಡಿ ಪಂಚನಾಮೆ ಮಾಡಿದ್ದೇನೆ.

ದಿಃ 17–08–2020 ರಂದು ಮುದ್ದೆಮಾಲನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇನೆ. ದಿಃ 30–09–2020 ರಂದು ಎಫ್ ಎಸ್ ಎಲ್ ವರದಿಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ.

ದಿಃ 16–10–2020 ರಂದು ಗಾಯಾಳು ಸಚೀನ ರವರ ಗಾಯದ ಪ್ರಮಾಣ ಪತ್ರ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ–13 ಎಂದು ಗುರತಿಸಲಾಗಿದೆ.

ದಿಃ 23–10–2020 ರಂದು ನ್ಯಾಯಾಲಯದ ಆದೇಶದ ಮೇರೆಗೆ 1 ನೇ ಆರೋಪಿ ಹಾಜರು ಮಾಡಿದ ಆತನ ಆಟೋವನ್ನು ಆತನ ವಶಕ್ಕೆ ನೀಡಿದ್ದೇನೆ.

ಚಾಸಾ–13 ರವರಿಂದ ಫೋಟೋ ತೆಗೆದ ಬಗ್ಗೆ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರ ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗ ನೋಡುತ್ತಿದ್ದು, ನಿಪಿ–20 ಎಂದು ಸಾಕ್ಷಿಯ ಸಹಿಯನ್ನು ನಿಪಿ–20(ಎ) ಎಂದು ಗುರುತಿಸಲಾಗಿದೆ. ಫೋಟೋಗಳನ್ನು ಸಾಫ್ಟ ಕಾಪಿಗೆ ಅಳವಡಿಸಿದ ಸಿಡಿಯನ್ನು ಈಗ ಹಾಜರು ಮಾಡಿದ್ದು, ಅದನ್ನು ನಿಪಿ–21 ಎಂದು ಗುರುತಿಸಲಾಯಿತು.

ದಿಃ 10–11–2020 ರಂದು ವೈದ್ಯರ ಮುಂದೆ ಗಾಯದ ಪ್ರಮಾಣ ಪತ್ರವನ್ನು ಹಾಜರು ಮಾಡಿ , ಹೆಚ್ಚಿನ ಅಭಿಪ್ರಾಯ ವರದಿ ಪಡೆದುಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ–14 ಎಂದು ಗುರುತಿಸಲಾಗಿದೆ.

ದಿಃ 15–12–2020 ರಂದು ಕೃತ್ಯ ನಡೆದ ಸ್ಥಳದ ನಕಾಶೆ ತಯಾರಿಸಿ ಕೊಡಲು ಪಿಡಬ್ಲ್ಯೂಡಿ ಇಲಾಖೆಯವರಿಗೆ ಮನವಿ ಮಾಡಿದ್ದು , ದಿಃ 16–12–2020 ರಂದು ನಕಾಶೆಯನ್ನು ಪಡೆದು ಕಡತಕ್ಕೆ ಸೇರಿಸಿಕೊಂಡಿದ್ದೇನೆ. ಅದನ್ನು ಈಗಾಗಲೇ ನಿಪಿ–11 ಎಂದು ಗುರುತಿಸಲಾಗಿದೆ.

ದಿಃ 23–01–2021 ರಂದು ತನಿಖೆ ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಸಾಕಷ್ಟು ಸಾಕ್ಷ್ಯಾದಾರಗಳು ಇದ್ದ ಕಾರಣ ದೋಷಾರೋಪಣ ಪಟ್ಟಿ ಸಲ್ಲಿಸಿದ್ದೇನೆ.

**ಪಾಟೀಸವಾಲುಃ– ಆರೋಪಿತರ ಪರ ಶ್ರೀ ಎಂ ಆರ್ ಹೆಚ್ ವಕೀಲರಿಂದಃ–**

ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀಸವಾಲನ್ನು ರೂ **1000/–** ವೆಚ್ಚದೊಂದಿಗೆ ಮುಂದೂಡಲಾಯಿತು.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.